Doc 253
T-P.2

R No KRNN 12 4-3-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ವ್ಯಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ ಸುಬ್ಬರಾವ್ ಸಂಪಾದಕರು ಧರ್ಮಕರ್ತಾವರಿತ ಎಂ. ಎಸ್. ಕೃಷ್ಣರಾವ್ 13 ಪು.

ಕೋಸಿಕೋಡು ಆದಾಯ ಕಚೇರಿ ಮುಂದೆ ಸತ್ಯಾಗ್ರಹ

ಹೊಟ್ಟೆಗಿಲ್ಲದೆ ಮಕ್ಕಳನ್ನು ಮಾರಿದ

ಷಿಲಾಂಗ್— ಅಸ್ಸಾಂ ಗೋಲ್ಪುರ ಜಿಲ್ಲೆಯಲ್ಲಿಯ ವ್ಯವಸಾಯ ಕಾರ್ಮಿಕ ಮಹಮದ್ ನಾಜಿಂ ಅಲಿ ದಕ್ಷಿಣ ಸಾಲಮಾರ್ ಬಜಾರಿನಲ್ಲಿ ಭಾನುವಾರ ತನ್ನ ನಾಲ್ಕು ಮಕ್ಕಳನ್ನು ಮಾರಿದನು; ಅವರ ಮತ್ತು ತನ್ನ ರಕ್ಷಣೆಗಾಗಿ ಹೀಗೆ ಮಾಡಿದುದಾಗಿ ಹೇಳಿದನು; ಮಾರಿದ್ದ 12 ವರ್ಷದ ಮಗನೊಡನೆ ನನಗೆ ವಾಪಸ್ಸು ಬಂದನು; ಅವನ ಹೆಂಡತಿ ಕೆಲ ದಿನಗಳ ಹಿಂದೆ ಎಲ್ಲೋ ಹೊರಟುಹೋಗಿರುವಳು — ಅತ್ತ ಕಡೆ ಬೆಳೆಯಾಗದೆ ಆರ್ಥಿಕ ಅಸ್ಥಿರತೆ ವಿಪರೀತವಾಗಿದೆ.

★

ಅಪಾರ ಬೇಬಿ ಫುಡ್ ವಶ

ಬೆಂಗಳೂರು— ರೂ 1 25 ಲಕ್ಷ ಬೆಲೆಯ ಘೋಷಿಸಲ್ಪಡದ ಬೇಬಿ ಫುಡ್ ದಾಸ್ತಾನನ್ನು ಕಬ್ಬನ್‌ಪೇಟೆಯ ಒಂದು ಗೋಡೌನಿನಿಂದ ಪೋಲೀಸರು ವಶಪಡಿಸಿಕೊಂಡರು — 7200 ಬೇಬಿ ಫುಡ್ ಟಿನ್ನುಗಳು ಸಿಕ್ಕಿದವು

★

ತುಂಡುಬಟ್ಟೆ ಸತ್ಯಾಗ್ರಹ

ಕೋಸಿಕೋಡು— ಬಟ್ಟೆ ಮಾಡುವವರ ಅವಶ್ಯ ಪದಾರ್ಥಗಳ ಏರಿಕೆ ಪ್ರತಿಭಟಿಸಿ ಸೊಂಟಕ್ಕೆ ಮಾತ್ರ ತುಂಡು ಬಟ್ಟೆ ಸುತ್ತಿಕೊಂಡು ಆದಾಯ ಕಚೇರಿ ಮುಂದೆ 30 ಕಮ್ಯುನಿಸ್ಟ್ ಸ್ವಯಂಸೇವಕರು ಸತ್ಯಾಗ್ರಹ ನಡೆಸಿದರು

★

ಮಹಿಳೆ ಅಧ್ಯಕ್ಷಕ್ಕೆ ನಹಿಸಲಿ

ಬೆಂಗಳೂರು— ಮೇ ತಿಂಗಳಲ್ಲಿ ಮಂಡ್ಯದಲ್ಲಿ ನಡೆಯುವ 48 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಮಹಿಳೆಯರಿಗೆ ದೊರಯಲಿ ಎಂದು ಕೆಲವರು ಮಹಿಳೆಯರ ಆಶಾಕಾಂಕ್ಷೆಯಾಗಿದೆ.

ಪಡಿತರ

★

ಮೈಸೂರು— ನಗರದಲ್ಲಿ ಅನೌಪಚಾರಿಕ ಪಡಿತರವನ್ನು ಮೇ ತಿಂಗಳಿಂದ ಜಾರಿಗೆ ತರಲಾಗುವುದೆಂದು ಆಹಾರ ಮಂತ್ರಿ ಶ್ರೀ ಕೆ ಹೆಚ್. ಪಾಟೀಲರು ಬಹಿರಂಗ ಸಭೆಯಲ್ಲಿ ಹೇಳಿದರು.

ಸಿಟಿ ಮುನಿಸಿಪಲ್ ಆಫೀಸು,
ಮೈಸೂರು, ತಾ : 27-2-74
ಅಂ.ಪ. ಎಸ್.14. 73-74

ಸಂಕಿಪ್ತ ಪ್ರಕಟಣೆ

ಮೈಸೂರು ಸಿಟಿಯಲ್ಲಿ ಹೊಸಜಾಗಿ ನಿರ್ಮಿಸಿರುವ ಸೈಕಲ್ ಸ್ಟ್ಯಾಂಡುಗಳಲ್ಲಿ— ಧನ್ವಂತರಿ ರೋಡು ರಸ್ತೆ, ವಿಕ್ಟೋರಿಯಾ ಗರ್ಲ್ಸ್ ಸ್ಕೂಲ್ ಮುಂಭಾಗ ಮತ್ತು ವಿಶ್ವೇಶ್ವರಯ್ಯ ಭವನದ ಹಿಂಭಾಗ. ಈ ಮೂರು ಸ್ಟ್ಯಾಂಡುಗಳನ್ನು ಒಟ್ಟಾಗಿ ಮುನಿಸಿಪಾಲಿಟಿಯಿಂದ ಸ್ವಾಧೀನ ಪಡೆದಲಾಗಾಯ್ತು 1975 ನೇ ಮೇ ಮಾಹೆ ಅಖೈರುವರೆಗೆ ವಿಧಾಯಕವಾದ ದರದಂತೆ ಬೈಸಿಕಲ್ಲುಗಳ ಮೇಲೆ ಡೈಲೀಫೀ ವಸೂಲ್ಮಾಡುವ ಹಕ್ಕನ್ನು ತಾ : 11-3-74 ನೇ ಸೋಮವಾರ ಬೆಳಿಗ್ಗೆ ||ಗಂಟೆಲಾಗಾಯ್ತು ದೇವರಾಜ ಮಾರ್ಕೆಟ್ ಆಫೀಸಿನಲ್ಲಿ ದುಸರಾ ಹರಾಜು ಮೂಲಕ ಮುನಿಸಿಪಲ್ ಕಮೀಷನರ್ ರವರಿಂದಾಗಲೀ ಅಥವಾ ಅವರಿಂದ ನೇಮಿಸಲ್ಪಡುವ ರೆವಿನ್ಯೂ ಆಫೀಸರ್ ರವರಿಂದಾಗಲೀ ವಿಶೇಷಡಿಸಲಾಗುತ್ತೆ. ಇಷ್ಟವುಳ್ಳವರು ಸಕಾಲಕ್ಕೆ ಹಾಜರಾಗಿ ಪಡಸವಾಲು ಮೂಲಕ ಪಡೆಯಬಹುದು ವಿವರಗಳನ್ನು ಆಫೀಸು ವೇಳೆಯಲ್ಲಿ ರೆವಿನ್ಯೂ ಸೆಕ್ಷನ್‌ನಲ್ಲಿ ಪಡೆಯಬಹುದು.

(ಸಹಿ) ಎಸ್. ಸ್ವತಂತ್ರರಾವ್
ಮುನಿಸಿಪಲ್ ಕಮೀಷನರ್

ಹಣದುಬ್ಬರ

ಟೋಕಿಯೋ— ಹಣದುಬ್ಬರ ನಿಲ್ಲಲು ಜಪಾನಿನಾದ್ಯಂತ ಪ್ರಮುಖ ಸಹಕಾರಿ ಗಟ್ಟಿ ಕಾರ್ಮಿಕರು ಮತ್ತು ಗೃಹಣಿಯರು ಸ್ವಾಮೂಹಿಕ ಪ್ರತಿಭಟನಾ ರ್ಯಾಲಿ ನಡೆಸಿದರು

ವಿಮಾನ ಅಪಹರಣ

ಪ್ಯಾರಿಸ್— ಲಂಡನ್ನಿಗೆ ಹೋಗುತ್ತಿದ್ದ ಟರ್ಕಿ ವಿಮಾನವು ಪ್ಯಾರಿಸ್ಸಿಗೆ ದೆಸ್ಸಿಣದ ತಲಿಗೆ ವಿಮಾನ ನಿಲ್ದಾಣದಿಂದ ಹೊರಟ ನಂತರ ಪಡಿದು ಅರಣ್ಯಕ್ಕೆ ಬಿಸ್ಸಾ, ಅದರಲ್ಲಿದ್ದ 345 ಮಂದಿ ಪಕ್ಷರು.

★

ಸಕ್ಕರೆ ರಫ್ತು

ವಾಷಿಂಗ್ಟನ್— ಅಮೇರಿಕಾಕ್ಕೆ ಭಾರತವು ಸಕ್ಕರೆ ರಫ್ತನ್ನು ಎರಡರಷ್ಟು ಮಾಡಲು ಕೇಳಿಕೊಂಡಿತು — ಅವರೆ ಅಮೇರಿಕಾ ವಿದೇಶಾಂಗ ನೀತಿಗೆ ಭಾರತದ ಬೆಂಬಲವಿಲ್ಲದುದಕ್ಕಾಗಿ ಅಮೇರಿಕಾ ವ್ಯವಸಾಯ ಸಮಿತಿ ನಿರಾಕರಿಸಿತು — ಅಮೇರಿಕಾಕ್ಕೆ 2 ಲಕ್ಷ ಟನ್ ಸಕ್ಕರೆ ರಫ್ತಿಗೆ ಭಾರತ ಕೇಳಿತ್ತು

ಬೆಳಗಾಂ ಉಳಿಯುತ್ತೆ

ಮೈಸೂರು— ತಾವು ಮುಖ್ಯ ಮಂತ್ರಿಯಾಗಿರುವರೆಗೆ ಬೆಳಗಾಂ ಮಹಾರಾಷ್ಟ್ರಕ್ಕೆ ಹೋಗಲು ಬಿಡುವುದಿಲ್ಲವೆಂದು ಶ್ರೀ ದೇವರಾಜ ಅರಸ್‌ರವರು ಬಹಿರಂಗ ಸಭೆಯಲ್ಲಿ ಹೇಳಿದರು.

ಗುಜರಾತ್ ಬಂದ್

ಅಹಮದಾಬಾದು— ರಾಜ್ಯವ್ಯಾಪಿ ಬಂದ್ ವಾರ ಬಂದ್ ಆಚರಿಸಿತು — ಅನೇಕ ಕಡೆ ಪೋಲೀಸರ ಗೋಳೀಬಾರು ನಡೆಯಿತು — ಒಬ್ಬ ಸತ್ತು ಹಲವರು ಗಾಯಗೊಂಡರು

★

ಲೇವಾದೇವಿ ಹೃದಯಚ್ಛೇದಕ ಕಥೆ

ಹೈದರಾಬಾದು— ಒಬ್ಬ ಸರಕಾರಿ ನೌಕರನು ಒಬ್ಬ ಲೇವಾದೇವಿ ಮಾಡುವವನಿಂದ ರೂ. 2000 ಸಾಲ ಪಡೆದು, ಇಲ್ಲಿಯವರೆಗೆ ಅದಕ್ಕೆ ರೂ. 30000 ಬಡ್ಡಿ ಕೊಟ್ಟಿದ್ದರೂ ಸಾಲದಿಂದ ವಿಮುಕ್ತನಾಗಿಲ್ಲವೆಂದು ಪೋಲೀಸ ಪ್ರೆಸ್ ನೋಟು ತಿಳಿಸುತ್ತದೆ — ಸಾಲ ಕೊಟ್ಟವರು ಜಪ್ತರನ್ನು ಸಂಬಳದ ದಿವಸ ಅವರ ಕಛೇರಿಗಳಲ್ಲಿ ಹಿಂಸೆ ಮಾಡುತ್ತಿರುವವರೆಂದು ದೂರು ಬಂದ್ದು ಪೋಲೀಸರು ಲೇವಾದೇವಿ ಮಾಡುವ 17 ಮಂದಿಯನ್ನು ಬಂಧಿಸಲಾಗಿದೆಯೆಂದೂ ತಿಳಿಸಲಾಗಿದೆ.

★

ನೇತಾಜಿ ಸ್ಮಾರಕ

ನಾಗಪುರ— ಇಲ್ಲಿ ಪೌರಸಭೆ ನಿರ್ಮಿಸಿರುವ ಜವಾನ್ ಹುತಾತ್ಮರ ಸ್ಮಾರಕವನ್ನು ಕೆಡವಿ, ಅಲ್ಲಿ ನೇತಾಜಿ ಸುಭಾಷ ಚಂದ್ರ ಬೋಸರ ಸ್ಮಾರಕ ಇಡಲು ನಿರ್ಧರಿಸಿರುವುದಾಗಿ ಮಹಾ ವಿಧರ್ಬಾ ರಾಜ್ಯ ಸಂಗ್ರಾಮ ಸಮಿತಿ ಕಾರ್ಯದರ್ಶಿ ಶ್ರೀ ರಾಂ ಹಿದೋ, ಎಂ ಪಿ ಘೋಷಿಸಿರುವರು.

★

ಉರ್ದು ಜ್ಞಾನಪೀಠ

ಬೆಂಗಳೂರು— ಈಚೆಗೆ ಸ್ಥಾಪಿತವಾದ ಉರ್ದು ಮಾತನಾಡುವವರ ಸಂಘವು, ಇಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಉರ್ದು ಜ್ಞಾನಪೀಠ ಸ್ಥಾಪನೆಗೆ ಅಸಹಕಾರ ನೀತಿಯನ್ನು 16 ಮಂದಿ ಉರ್ದು ಮಾತನಾಡುವ ಶಾಸಕರನ್ನು ರಾಜೀನಾಮೆ ಕೊಡುವಂತೆ ತಿಳಿಸಿದೆ

★

ಆರೋಗ್ಯ ಪ್ರಗತಿ

ಭಾರತ ಸರಕಾರ ಆರೋಗ್ಯ ಸಂಸ್ಥೆಯು, ರಾಜಧಾನಿಯಲ್ಲಿ ಕಳೆದ 10 ವರ್ಷಗಳಿಂದ ಮೇಹರೋಗವು ಹೆಚ್ಚಿದೆ, ಎಂದು ತಿಳಿಸಿದೆ. ಸಂಸ್ಥೆಯು ನಡೆಸುತ್ತಿರುವ ಮೇಹರೋಗ ಚಿಕಿತ್ಸಾಲಯಗಳಲ್ಲಿಯು ಅಂಕಿ ಅಂಶಗಳಂತೆ 72–73 ರಲ್ಲಿ ಶೇಕಡ 18 ರೋಗಿಗಳು ಹೊಸವರಾಗಿದ್ದರು ; ಇದರ ಹಿಂದಿನ ದಶಕದಲ್ಲಿ ಶೇಕಡ 5 ಮಾತ್ರ ಇದ್ದರು. ಈ ಚಿಕಿತ್ಸಾಲಯಗಳು 485 ರೋಗಿಗಳಿಗೆ ಚಿಕಿತ್ಸೆ ನಡೆಸಿದವು ; ಆ ಪೈಕಿ 98 ಮಂದಿ 11–20 ವಯಸ್ಸಿನ ಗುಂಪಿನಲ್ಲಿದ್ದರು ; ಈ ಪೈಕಿ 26 ಹುಡುಗಿಯರು ; ಶೇಕಡ 50 ಅಂದರೆ 231 ಮಂದಿ 21–30 ವಯಸ್ಸಿನ ಗುಂಪಿನಲ್ಲಿದ್ದರು ; ಈ ಪೈಕಿ 66 ಮಂದಿ ಮಹಿಳೆಯರು. ಚಿಕಿತ್ಸಾಲಯಗಳು ಒಟ್ಟು 8890 ಮಂದಿಯ ಪರೀಕ್ಷೆ ನಡೆಸಿದವು ; ಈ ಪೈಕಿ ಮೇಹರೋಗ ಹೊಂದು ತಗಲಿದ್ದವರು ಶೇಕಡ 5 ಕ್ಕೆ ಹೆಚ್ಚಾಗಿದ್ದರು. (ಹಿಂದೂಸ್ತಾನ್ ಸ್ಟ್ಯಾಂಡರ್ಡ್)

ಶ್ರೀಪಕ್ಷ ಶಾಂತಿ ಸಮ್ಮೇಳನ

ಕೈರೋ— ಈಜಿಪ್ಟ್ ಅಧ್ಯಕ್ಷ ಶ್ರೀ ಅನ್ವರ್ ಸಾದತ್‌ರವರು, ಇಲ್ಲಿ ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳು ತ್ರಿಪಕ್ಷ ಶಾಂತಿ ಸಮ್ಮೇಳನ ನಡೆಸಲು ಆಹ್ವಾನಿಸಿವೆ.

★

Quality Printing Neat Binding

Lakshminarasimha Press

Sivarampet, Mysore 1

Contribute Liberally

to the National Defence Fund

SHAKTI

SUDHA

A Superb Tonic

Help The Gorakshana

— HumanitarianPropoganda Monthly ....

ವುಡ್‌ಲಾಂಡ್ 1 3 74 ರಿಂದ

ಅವೋಘ ಆರಂಭ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಪ್ರಾಣ್, ನವೀನ್ ನಿಶ್ಚಲ್, ಶೀಲಾ

ದಿನ 4 ಪ್ರದರ್ಶನಗಳು – 10-30, 3, 6-30, 9-45

11–15 ರಿಂದ 12 ರ ವರೆಗೆ ಬಾಲ್ಕನಿ ಕರಗತಿಗಳಿಗೆ ಮುಂಗಡ ಬುಕಿಂಗ್ ಇದೆ

★

ಅಪೇರಾ 20 2 74 ರಿಂದ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ರತ್ನ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಸತ್ಯನಾರಾಯಣ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satvadi Press, Chamaraja puram Mysore